

## ಎಲ್ಲರಿಗೂ ಒಗ್ಗುವ ಉಡುಗೆ



ಕೋಟ್ ಮೇಲೆ ಡಿಸೈನ್, ಎಂಬ್ರಾಯ್ಡರಿ, ಹೂವು, ಜೇಬಿನ ಮೇಲೆ ಹೂವಿನ ಚಿತ್ರ ನೇಯ್ಗೆ ಮಾಡುತ್ತೇವೆ. ಇದು ಸಂಪೂರ್ಣ ಹ್ಯಾಂಡ್ ವರ್ಕ್ ಆಗಿರುತ್ತದೆ. ಬಜೆಟ್ ಮತ್ತು ಗ್ರಾಹಕರ ಬೇಡಿಕೆಗೆ ತಕ್ಕಂತೆ ಅದನ್ನು ರೂಪಿಸಲಾಗುತ್ತದೆ. ದಾರದಲ್ಲಿಯೂ ಬಣ್ಣ ಮತ್ತು ಗುಣಧರ್ಮದಲ್ಲಿ ಭಿನ್ನತೆ ಇರುತ್ತದೆ. ಯಾವ ಕಾರಣಕ್ಕೂ ಪ್ರಿಂಟೆಂಡ್ ಚಿತ್ರವನ್ನು ಹಾಕುವುದಿಲ್ಲ. ವಿನ್ಯಾಸಕ್ಕೆ ಸೂಕ್ತವಾಗಬಲ್ಲ ಮೆಟಲ್, ಹರಳು, ಸ್ಟಾರ್, ಬೊಟ್ಟುಗಳನ್ನು ಬಳಸುತ್ತೇವೆ.

ಆದರೆ, ಪ್ಯಾಂಟ್‌ನಲ್ಲಿ ಹೆಚ್ಚು ಬದಲಾವಣೆ ಇರಲ್ಲ. ಸಾಮಾನ್ಯವಾಗಿ ಎಲ್ಲ ಬಗೆಯ ಕುರ್ತಾಗಳಿಗೂ ಒಂದೇ ರೀತಿ ಇರುತ್ತವೆ. ಅದರಲ್ಲೂ ಇತ್ತೀಚೆಗೆ ಹೊಸ ರೂಪವನ್ನು ಹಳೆಯ ಮಾದರಿಯಲ್ಲಿ ಕಾಣುತ್ತಿದ್ದೇವೆ. ಅಂದರೆ ಪ್ಯಾಂಟ್ ಬಾಟಮ್ ಬಿಗಿಯಾಗಿದ್ದು ಮೇಲ್ಭಾಗದಲ್ಲಿ ಸಡಿಲವಾಗಿರುತ್ತದೆ.

ಕುರ್ತಾ ಎಲ್ಲ ಕಾಲಕ್ಕೂ ತನ್ನ ವೈಭವದ ಕಾರಣಕ್ಕೆ ಒಗ್ಗುತ್ತದೆ. ಮದುವೆ ಮತ್ತು ಶುಭ ಸಮಾರಂಭಗಳು ಮಾತ್ರವಲ್ಲದೆ, ಖಾಸಗಿಯಾಗಿ ಸಂಗ್ರಹಿಸಿ ಇಡುತ್ತಾರೆ. ಸೆಲೆಬ್ರಿಟಿಗಳು ಪ್ರಶಸ್ತಿ ಪುರಸ್ಕಾರ ಸಮಾರಂಭಗಳಿಗೆ ಹಾಜರಾಗಲು ಕುರ್ತಾಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ.

ಖಾದಿ ಮತ್ತು ನೆಹರೂ ಫ್ಯಾಷನ್ ಟ್ರೆಂಡ್ ಕೂಡ ಇದೆ. ಇವು ಸರಳವಾಗಿ ಕಾಣಿಸುತ್ತವೆ. ಬಿಳಿ ಮತ್ತು ಕ್ರೀಮ್ ಬಣ್ಣದ ಆಯ್ಕೆಯನ್ನು ಬಹುತೇಕರು ಮಾಡುತ್ತಾರೆ. ಏಕೆಂದರೆ ಪೂಜೆ ಪುನಸ್ಕಾರಗಳಿಗೆ ಇದು ಚಂದ ಮತ್ತು ಶ್ರೇಯಸ್ಕರ ಎನ್ನುವ ನಂಬಿಕೆಯೂ ಇದೆ.

–ಪಾಲ್ಗುಣಿ ಗೌಡ

ಫ್ಯಾಷನ್ ಡಿಸೈನರ್ ಮತ್ತು ಕೊರಿಯೊಗ್ರಫರ್

ಕುರ್ತಾ ಮೇಲೆ ಡಿಸೈನ್ ಮಾಡುವುದು ಫ್ಯಾಷನ್ ಜಗತ್ತಿನ ಇತ್ತೀಚಿನ ಆಕರ್ಷಣೆ. ಇಷ್ಟವಾದ ಪ್ರಾಣಿ, ಪಕ್ಷಿ, ಪುಷ್ಪ ಹೀಗೆ ಥರಾವರಿ ವಿನ್ಯಾಸದ, ನಾವೀನ್ಯದ ಚಿತ್ರಗಳನ್ನು ಮೂಡಿಸಬಹುದು. ಇದು ಹೊಸ ಶೈಲಿ ಮಾತ್ರವಲ್ಲ ಯುನಿಕ್ ಆಗಿರುತ್ತದೆ. ತೋಳಿನ ಮೇಲೆ ಬಂಧಿಯಾಗುವ ನಿಸರ್ಗದ ಸೊಬಗು ನಮ್ಮ ಟೇಸ್ಟ್ ಅನ್ನು ಕೂಡ ತೋರಿಸುತ್ತದೆ. ಅಂತೆಯೇ ಎದೆಯ ಮೇಲೆ ಹೂವನ್ನು ಅರಳಿಸುವುದು ಈ ಟ್ರೆಂಡ್‌ನ ಭಾಗ.



### ಇಬ್ಬರಿಗೆ ಒಂದೇ ವಿನ್ಯಾಸ

ಮದುವೆಯ ವೇದಿಕೆಯಲ್ಲಿ ವಧು–ವರ ಇಬ್ಬರೂ ಒಂದೇ ರೀತಿ ಡ್ರೆಸ್ ಮಾಡಿಕೊಂಡಿದ್ದಾರಲ್ಲ ಎಂದು ಬೆರಗುಗಣ್ಣಿನಿಂದ ನೋಡಿದಂತೆ, ಇನ್ನಾವುದೋ ಶುಭ ಸಮಾರಂಭದಲ್ಲಿ 40 ವಯಸ್ಸಿನ ಅಪ್ಪ, 8 ವರ್ಷದ ಮಗ ಡಿಟ್ಟೊ ಡ್ರೆಸ್ ಮಾಡಿದ್ದಾರಲ್ಲ, ಏನು ಕಾಲ ಬಂತಪ್ಪ ಎಂದೂ ಉದ್ಗಾರವನ್ನು ತೆಗೆದವರಿದ್ದಾರೆ. ಇದೀಗ ಅದುವೇ ಹೊಸ ಟ್ರೆಂಡ್. ಮಹಿಳೆಯ ಕುರ್ತಾ, ಪುರುಷರ ಕುರ್ತಾ ಹೋಲಿಗೆಯ ಶೈಲಿ ಬೇರೆಯ ಮಾದರಿಯದ್ದಾಗಿದ್ದರೂ ಒಂದೇ ರೀತಿ ವಿನ್ಯಾಸ ಬಯಸುತ್ತಾರೆ. ಅಂತೆಯೇ ಪಾಲಕ ಬಾಲಕನಿಗೆ ಏಕರೂಪದ ಕುರ್ತಾ ಮತ್ತು ಪ್ಯಾಂಟ್ ಅಣಿಮಾಡುತ್ತಿದ್ದಾರೆ.

ಕುರ್ತಾ ಟ್ರೆಂಡ್ ಕಾಲಮಾನದ ಫ್ಯಾಷನ್ ಆಗಿದ್ದರೂ ಅದು ಡಿಫರೆಂಟ್ ಆಗಿರಬೇಕು ಮತ್ತು ಕಂಫರ್ಟಬಲ್ ಇರಬೇಕು ಎನ್ನುವುದು ಎಲ್ಲ ಫ್ಯಾಷನ್ ಪ್ರೇಮಿಗಳ ಮನದಿಂಗಿತ. ಹಾಗಾಗಿ ಉಡುವ ನಿಲುವು ಮತ್ತು ಒಲವಿಗೆ ತಕ್ಕಂತೆ ಬಗೆ ಬಗೆಯ ವಿನ್ಯಾಸ ಮಾಡುತ್ತಾರೆ. ಅದುವೇ ಅವರ ಸ್ಟೈಲ್ ಆಗುತ್ತದೆ.

ಕುರ್ತಾದಲ್ಲಿಯೇ ಟ್ರೆಂಡಿ ಕುರ್ತಾ, ಬೆಲ್ ಬಾಟಮ್, ಫ್ಯಾಷನಬಲ್, ಡಿಸೈನರ್ ಕಲೆಕ್ಷನ್ ಕುರ್ತಾ ಹೀಗೆ ವೈವಿಧ್ಯ ರೂಪ ಲಾವಣ್ಯ ಅದಕ್ಕಿದೆ. ವರ್ಕ್ ಕೂಡ ಬೇರೆ ಬೇರೆ ಇರುತ್ತದೆ. ಆದರೆ ಪ್ಯಾಂಟ್ ಮಾತ್ರ ಸಾಮಾನ್ಯವಾಗಿ ಒಂದೇ ರೀತಿ ಇರುತ್ತವೆ.

### ಕೆಲವು ಟಿಪ್ಸ್

- ಬೇಸಿಗೆಯ ದಿನಗಳಿಗೆ ಕಾಟನ್ ಕುರ್ತಾ, ಕಾಟನ್ ಸಿಲ್ಕ್ ಕುರ್ತಾಗಳು ಹೆಚ್ಚು ಆರಾಮದಾಯಕ. ಕ್ಯಾಶುವಲ್ ಲುಕ್ ಬೇಕೆಂದರೆ ಜೀನ್ಸ್ ಪ್ಯಾಂಟ್ ಮೇಲೆ ಕಾಟನ್ ಕುರ್ತಾ ಧರಿಸಬಹುದು.
- ಚರ್ಮದ ಟೋನ್ ಮತ್ತು ಸಂದರ್ಭಕ್ಕೆ ಪೂರಕವಾದ ಬಣ್ಣಗಳನ್ನು ಆಯ್ಕೆ ಮಾಡಿಕೊಳ್ಳಿ.
- ಮದುವೆ ಮುಂತಾದ ಶುಭ ಸಮಾರಂಭಗಳಿಗೆ ರಾಯಲ್ ಲುಕ್ ನೀಡುವ ಸಲುವಾಗಿ ಗಾಢ ಬಣ್ಣದ ಕುರ್ತಾ ಆಯ್ಕೆ ಮಾಡುವುದು ಸೂಕ್ತ.